# ಶೈಕ್ಷಣಿಕ ಮಾಸ್ಟರ್ ಪ್ಲಾನ್

# ACADEMIC MASTER PLAN

## 2025-26

## GLPSCHOOL KALLAPPALLY

P.O. kallappally - 671532

Kasaragod

Edn. Dist :- kasaragod

Sub. Dist :- Hosdurg

Panchayath :- Panathady

Block :- Parappa

# ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಕಲ್ಲಪ್ಪಳ್ಳಿ

## ಶೈಕ್ಷಣಿಕ ಮಾಸ್ಟರ್ ಪ್ಲಾನ್ : 2025-26

### ಶಾಲಾ ಪ್ರಾಥಮಿಕ ವಿವರಗಳು

ಶಾಲೆಯ ಹೆಸರು : ಸ. ಕಿ. ಪ್ರಾ. ಶಾಲೆ ಕಲ್ಲಪ್ಪಳ್ಳಿ

ವಿಳಾಸ : ಕಲ್ಲಪ್ಪಳ್ಳಿ ಅಂಚೆ. ಪನತ್ತಡಿ ವಿಲೇಜ್ ಕಾಸರಗೋಡು
671532.

ಶಾಲಾ ಕೋಡ್ : 12307

ವಿದ್ಯಾಭ್ಯಾಸ ಉಪಜಿಲ್ಲೆ : ಹೊಸದುರ್ಗ

ವಿದ್ಯಾಭ್ಯಾಸ ಜಿಲ್ಲೆ : ಕಾಸರಗೋಡು

ಬಿ. ಆರ್. ಸಿ : ಹೊಸದುರ್ಗ

ಸಿ. ಆರ್. ಸಿ. : ಚುಳ್ಳಿಕ್ಕರ

ಗ್ರಾಮ ಪಂಚಾಯತ್ : ಪನತ್ತಡಿ (೧ ವಾರ್ಡ್)

ಬ್ಲಾಕ್ ಪಂಚಾಯತ್ : ಪರಪ್ಪ

ಜಿಲ್ಲಾ ಪಂಚಾಯತ್ : ಕಾಸರಗೋಡು

ವಿಧಾನ ಸಭಾ ಮಂಡಲ : ಕಾಂಞಂಗಾಡ್

ಲೋಕಸಭಾ ಮಂಡಲ : ಕಾಸರಗೋಡು

ತಾಲೂಕು : ವೆಳ್ಳರಿಕುಂಡು

ಗ್ರಾಮ : ಪನತ್ತಡಿ

ಇ. ಮೇಲ್ : 12307glpschoolkallappally@gmail.com

# ಮುನ್ನುಡಿ

2024-25 ನೇ ಅಧ್ಯಯನ ವರ್ಷದಲ್ಲಿ ಒಂದನೇ ತರಗತಿಯಿಂದ ಎರಡನೇ ತರಗತಿಗೆ ಬಂದ ಪ್ರತಿ ಮಗುವಿನ ಉತ್ತಮ ಕಲಿಕಾಮಟ್ಟವನ್ನು ಖಾತರಿ ಪಡಿಸಬೇಕಾದುದು ನಮ್ಮ ಕರ್ತವ್ಯವಾಗಿದೆ.

ಇದಕ್ಕೆ ಇರುವ ಒಂದು ಸಹಾಯ ಹಸ್ತವೇ "ಅಕಾಡೆಮಿಕ್ ಮಾಸ್ಟರ್ ಪ್ಲಾನ್". ಬದಲಾದ ಪಠ್ಯಕ್ರಮವನ್ನು ಆಧಾರವಾಗಿಟ್ಟುಕೊಂಡು ಎಲ್ಲಾ ಮಕ್ಕಳಿಗೂ ಒದಗುವ ರೀತಿಯಲ್ಲಿ ಸಮಾನತೆಯನ್ನು ಮತ್ತು ಗುಣಮಟ್ಟವನ್ನು ಕಾಯ್ದುಕೊಂಡಿರುವ ಶಿಕ್ಷಣವನ್ನು ಖಾತರಿಪಡಿಸಿಕೊಂಡು ತಯಾರಿಸಿದ ಒಂದು ಚಟುವಟಿಕಾ ಪದ್ಧತಿಯಾಗಿದೆ ಇದು. ಇದರಲ್ಲಿ ಕನ್ನಡ, ಇಂಗ್ಲೀಷ್, ಗಣಿತ ಪರಿಸರ ಅಧ್ಯಯನ, ICT ಎಂಬ ವಿಷಯಗಳು ಸೇರಿಕೊಂಡಿವೆ.

ಉತ್ತಮ ಗುಣಮಟ್ಟದ ಕಲಿಕೆಯ ಭಾಗವಾಗಿ ತಯಾರಿಸಿದ ಅಕಾಡೆಮಿಕ್ ಮಾಸ್ಟರ್ ಪ್ಲಾನ್‌ನಲ್ಲಿ ವೈಜ್ಞಾನಿಕ, ಸಾಮಾಜಿಕ, ಭಾವನಾತ್ಮಕ, ಶಾರೀರಿಕ, ಸೃಜನಾತ್ಮಕ ಹಾಗೂ ಭಾಷಾ ವಿಕಾಸ ಮಂಡಲಗಳಿಗೆ ಅನುಯೋಜ್ಯವಾಗುವಂತಹ ವಿವಿಧ ಚಟುವಟಿಕೆಗಳಿವೆ. ವೈವಿಧ್ಯಮಯವಾದ ಕಲಿಕಾ ಚಟುವಟಿಕೆಗಳನ್ನು ನೂತನ ಕಲಿಕಾ ತಂತ್ರಗಳ ಮೂಲಕ ನಡೆಸುವುದರಿಂದ ಪ್ರತಿ ಮಗುವಿಗೂ ಕಲಿಕೆಯಲ್ಲಿ ಆಸಕ್ತಿ ಮೂಡಬಹುದು. ಇದರಿಂದ ಎಲ್ಲಾ ಮಕ್ಕಳ ಕಲಿಕಾ ಮಟ್ಟವನ್ನು ಉತ್ತಮ ಗುಣಮಟ್ಟದೊಂದಿಗೆ ಸಮಾನತೆಗೊಳಿಸಲು ಸಾಧ್ಯವಾಗುವುದು. ರಕ್ಷಕರ ಸಂಪೂರ್ಣ ಬೆಂಬಲದೊಂದಿಗೆ ಈ ಚಟುವಟಿಕಾ ಪದ್ಧತಿಯು ಯಶಸ್ವಿಯಾಗುವುದು.

| ಕ್ರಮ ಸಂಖ್ಯೆ | ಉದ್ದೇಶ | ಚಟುವಟಿಕೆಗಳು | ಜವಾಬ್ದಾರಿ | ಕಾಲಾವಧಿ |
|---|---|---|---|---|
| 1. | ಪ್ರವೇಶೋತ್ಸವ | * ಪ್ರವೇಶೋತ್ಸವ ಗೀತೆ<br>* ಮಕ್ಕಳಿಗೆ ಕಿರೀಟಗಳನ್ನು ನೀಡಿ ಬಾಂಡ್ ಮೇಳದೊಂದಿಗೆ ಸ್ವಾಗತಿಸುವುದು. | ಅಧ್ಯಾಪಕರು<br>P.T.A | ಜೂನ್ |
| 2. | ಸಿದ್ಧತಾ ಚಟುವಟಿಕೆಗಳು | ಆಟಗಳು, ನೃತ್ಯ, ಕತೆ ನಿರ್ಮಾಣ ಚಟುವಟಿಕೆಗಳು | ಅಧ್ಯಾಪಕರು | ಜೂನ್ |
| 3. | ಪಿ.ಪಿ.ಟಿ.ಎ. | ಹೆತ್ತವರ ಸಭೆ ಸೇರುವುದು | ಅಧ್ಯಾಪಕರು<br>ಮುಖ್ಯೋಪಾಧ್ಯಾಯರು | ಜೂನ್ - ಮಾರ್ಚ್ |
| 4. | ಪರಿಸರ ಸಂರಕ್ಷಣೆಯ ಕುರಿತಾಗಿ ಮಕ್ಕಳಲ್ಲಿ ಜಾಗೃತಿ ಮೂಡಿಸುವುದು | * ಪರಿಸರ ದಿನಾಚರಣೆ ಜೂನ್-5<br>* ಗಿಡ ವಿತರಣೆ, ನೆಡುವುದು<br>* ಹೂವಿನ ಗಿಡಗಳನ್ನು ನೆಡುವುದು<br>* ಪರಿಸರಕ್ಕೆ ಸಂಬಂಧಿಸಿದ ಚಿತ್ರ ಮಾಡಿ ಬಣ್ಣ ಹಚ್ಚುವುದು. | ರಕ್ಷಕರು<br>ಅಧ್ಯಾಪಕರು | ಜೂನ್ |

| | | | | |
|---|---|---|---|---|
| 5. | ಕಾವ್ಯೋತ್ಸವ | ಮಕ್ಕಳನ್ನು ಗುಂಪುಗಳಾಗಿ ಮಾಡಿ ಬಾಯಿ ತಾಳದೊಂದಿಗೆ ಹಾಡುವುದು | ಅಧ್ಯಾಪಕರು | ಜುಲಾಯಿ |
| 6. | ಸಂಗ್ರಹ ಪುಸ್ತಕ ತಯಾರಿ | ಪಾಠ ಪುಸ್ತಕದ ಚಟುವಟಿಕೆಗೆ ಹೊಂದಿಕೊಂಡು ಸಂಗ್ರಹ ಪುಸ್ತಕದಲ್ಲಿ ಚಿತ್ರಗಳನ್ನು ಮಾಡುವುದು. ಅಂಟಿಸುವುದು. ವಿವರಣೆ ಬರೆಯು -ವುದು | ಅಧ್ಯಾಪಕರು ಹೆತ್ತವರು. | ಜೂನ್-ಮಾರ್ಚ್ |
| 7 | ನಿರ್ಮಾಣ ಚಟುವಟಿಕೆ | ಕಲಿಕೋಪಕರಣಗಳ ತಯಾರಿ | ಅಧ್ಯಾಪಕರು ಹೆತ್ತವರು | ಜೂನ್. ಮಾರ್ಚ್ |
| 8. | ಕಥೋತ್ಸವ | ಮಕ್ಕಳು ಕಥೆಯನ್ನು ಬಾಧ್ಯರೆಯಾಗಿ ಹೇಳುವುದು. | ಅಧ್ಯಾಪಕರು | ಆಗೋಸ್ತು |

| | | | | |
|---|---|---|---|---|
| 9 | ಸಂಯುಕ್ತ ದಿನಚರಿ | ಮಕ್ಕಳಲ್ಲಿ ಸ್ವತಂತ್ರ ಬರವಣಿಗೆಯನ್ನು ಪ್ರೋತ್ಸಾಹಿಸುವ ಚಟುವಟಿಕೆಯಾಗಿದೆ ಮಕ್ಕಳ ದೈನಂದಿನ ಅನುಭವಗಳನ್ನು ಸರಳ ವಾಕ್ಯದಲ್ಲಿ ದಾಖಲಿಸುವುದರಿಂದ ಮಕ್ಕಳಲ್ಲಿ ಸ್ವಂತ ರಚನೆ, ಆತ್ಮವಿಶ್ವಾಸದ ಬೆಳ್ವಳಿ, ಆಶಯ ವಿನಿಮಯ ಮುಂತಾದ -ವುಗಳ ಬೆಳವಣಿಗೆಯಾಗುತ್ತದೆ. | ಅಧ್ಯಾಪಕರು ಹೆತ್ತವರು | ಜುಲಾಯಿ-ಮಾರ್ಚ್ |
| 10. | ವಾಚನೋತ್ಸವ. | ಚಿತ್ರ ಓದು, ಕಥೆ ಓದು, ಓದುವ -ಮಾಲೆ. | ಹೆತ್ತವರು ಅಧ್ಯಾಪಕರು | ಜೂನ್ |
| 11. | ತರಗತಿಯ ಮುಂದೆ ನಿಂತು ಅಭಿನಯ ಗೀತೆಗಳನ್ನು ಹಾಡಲು ಸಾಧ್ಯವಾಗುವುದು. | ಎಲ್ಲಾ ಮಕ್ಕಳನ್ನು ಮುಂದೆ ಕರೆದು ಅಭಿನಯ ಗೀತೆ ಹಾಡಿಸುವುದು. | ಅಧ್ಯಾಪಕರು | ಜೂನ್-ಮಾರ್ಚ್ |

| | | | | |
|---|---|---|---|---|
| 12 | ರಚನೋತ್ಸವ | ಮಕ್ಕಳ ಸೃಜನಾತ್ಮಕ ಸಾಮರ್ಥ್ಯಗಳ ವಿಕಾಸಕ್ಕೆ ಹಾಗೂ ಸ್ವತಂತ್ರ ರಚನೆಗೂ ಅವಕಾಶ ಕಲ್ಪಿಸುವುದು. ಈ ರೀತಿಯ ರಚನೋತ್ಸವಗಳು ಸಿಕ್ಕಿದ ವಿಷಯವನ್ನು ಪದ್ಯದ ರೂಪದಲ್ಲಿಯೋ, ಇತರ ಯಾವುದಾದರೂ ವ್ಯವಹಾರ ರೂಪಗಳ ಮೂಲಕ ವ್ಯಕ್ತಪಡಿಸುವುದೇ ಆಗಿದೆ ರಚನೋತ್ಸವದ ಉದ್ದೇಶ. | ಅಧ್ಯಾಪಕರು | ಆಗೋಸ್ತು - ಮಾರ್ಚ್ |
| 13. | ಮೌಲ್ಯಮಾಪನ. | ನಿರಂತರ ಮೌಲ್ಯಮಾಪನ ಮತ್ತು ಮಕ್ಕಳಿಗೆ ಸ್ವಯಂ ಮೌಲ್ಯಮಾಪನಕ್ಕೆ ಅವಕಾಶ ನೀಡುವುದು. | ಅಧ್ಯಾಪಕರು | ಜೂನ್ - ಮಾರ್ಚ್ |

| | | | | |
|---|---|---|---|---|
| 14 | ಚಿತ್ರಗಳ ಮೂಲಕ ಸರಳ ವಾಕ್ಯಗಳನ್ನು ಬರೆದು ಪದಗಳ ಪರಿಚಯ ಮಾಡುವುದು | ಚಿತ್ರಗಳನ್ನು ಓರಿಗಾಮಿಗಳನ್ನು ಮಾಡಿ ಸಚಿತ್ರ ಪುಸ್ತಕಕ್ಕೆ ಅಂಟಿಸಿ ಸರಳವಾದ ವಾಕ್ಯಗಳನ್ನು ಬರೆಯುವುದು. | ಅಧ್ಯಾಪಕರು ಚಿತ್ರವರು | ಜೂನ್-ಮಾರ್ಚ್ |
| 15. | ರೀಡರ್ಸ್ ಥಿಯೇಟರ್ | ಆಖ್ಯಾನದೊಂದಿಗೆ ಸಂಭಾಷಣೆಯನ್ನು ಇತರ ವ್ಯವಹಾರ ರೂಪಗಳನ್ನು ಓದಿ ಮಂಡಿಸುವುದಾಗಿದೆ ರೀಡರ್ಸ್ ಥಿಯೇಟರ್‌ನ ಉದ್ದೇಶ. | ಅಧ್ಯಾಪಕರು | ಜೂನ್-ಮಾರ್ಚ್ |
| 16. | ಮಕ್ಕಳ ಸೃಜನಾತ್ಮಕ ಬೆಳವಣಿಗೆಗೆ ಪೂರಕವಾಗಿ ಸ್ವಂತ ರಚನೆ ಚಿತ್ರಗಳಿಗೆ ಪ್ರೋತ್ಸಾಹ ನೀಡುವುದು. | * ಚಿತ್ರ ನೋಡಿ ಕಥೆ ಹೇಳುವುದು<br>* ಪದ್ಯಕ್ಕೆ ಸಾಲುಗಳನ್ನು ಸೇರಿಸುವುದು<br>* ಮಕ್ಕಳ ಉತ್ಪನ್ನಗಳನ್ನು ಸೇರಿಸಿ ಮಾಗಸಿನ್ ಮಾಡಿ ಬಿಡುಗಡೆ ಮಾಡುವುದು. | ಅಧ್ಯಾಪಕರು | ಜುಲಾಯಿ-ಮಾರ್ಚ್ |

| | | | | |
|---|---|---|---|---|
| 17 | ಮಕ್ಕಳಲ್ಲಿ ಶಿಸ್ತು, ಪರಸ್ಪರ ಪ್ರೀತಿ, ಸಹಕಾರ ಮನೋಭಾವ ಮೂಡಿಸುವುದು. | * ನೀತಿ ಕಥೆಗಳನ್ನು ಹೇಳುವುದು.<br>* ಅಸೆಂಬ್ಲಿ ನಡೆಸುವುದು.<br>* ತರಗತಿಯಲ್ಲಿ, ಶಾಲೆಯಲ್ಲಿ, ಮನೆಯಲ್ಲಿ ಅನುಸರಿಸಬೇಕಾದ ನಿಯಮಗಳನ್ನು ಹೇಳುವುದು. | ಅಧ್ಯಾಪಕರು ಹೆತ್ತವರು. | |
| 18. | ಭಾಷೆಯನ್ನು ಸಂದರ್ಭಕ್ಕನುಸರಿಸಿ ಬಾಯ್ದೆರೆಯಾಗಿ ವ್ಯಕ್ತಪಡಿಸಲು ಸಣ್ಣ ವಾಕ್ಯಗಳನ್ನು ಬರೆದು ಓದುವ ಸಾಮರ್ಥ್ಯ ಗಳಿಸುವುದು. | * ವಿವಿಧ ಕತೆಗಳನ್ನು ಆಲಿಸಲು ಅವಕಾಶ.<br>* ಚಿತ್ರಗಳನ್ನು ನೀಡಿ ಕತೆಯನ್ನು ಬಾಯ್ದೆರೆಯಾಗಿ ಹೇಳಲು ಅವಕಾಶ ನೀಡುವುದು.<br>* ಸರಳ ವಾಕ್ಯಗಳನ್ನು ಬರೆಯಲು ಅವಕಾಶ ನೀಡುವುದು.<br>* ಚಿತ್ರಗಳನ್ನು ನೋಡಿ ಸಂದರ್ಭಗಳನ್ನು ಅರ್ಥೈಸಿ ಸ್ವಂತವಾಗಿ ವಿವರಣೆ, ಕಥೆ ಬರೆಯುವುದು. | ಅಧ್ಯಾಪಕರು ಹೆತ್ತವರು. | |

| | | | | |
|---|---|---|---|---|
| 19 | ಚಿತ್ರವನ್ನು ಓದುವ ಪಠ್ಯವಾಗಿಯೂ ಓದುವಿಕೆಗೆ ಪೂರಕ ಚಟುವಟಿಕೆಯಾಗಿಯೂ ಪರಿಗಣಿಸುವುದು ಅದಕ್ಕೆ ಸಂಬಂಧಿಸಿದ ಆಶಯಗಳನ್ನು ಸ್ವಂತ ಭಾಷೆಯಲ್ಲಿ ಹೇಳಲು, ಬರೆಯಲು ಮತ್ತು ಮಂಡಿಸಲಿರುವ ಸಾಮರ್ಥ್ಯಗಳಿಸುವುದು. | * ಚಿತ್ರಗಳ ಆಧಾರದಲ್ಲಿ ಪ್ರಶ್ನೆಗಳನ್ನು ಕೇಳುವುದು<br>* ಚಿತ್ರ ನೋಡಿ ಕಥೆ ಮಂಡಿಸುವುದು ಮತ್ತು ಅಭಿನಯಿಸುವುದು. | ಅಧ್ಯಾಪಕರು ಹೆತ್ತವರು | ಜೂನ್-ಜುಲಾಯಿ |
| 20. | ಮಕ್ಕಳನ್ನು ನಿರ್ಮಾಣಾ ಪ್ರಕ್ರಿಯೆಯಲ್ಲಿ ತೊಡಗಿಸುವುದು. | ವೃತ್ತಿ ಪರಿಚಯದ ಕೆಲವು ವಸ್ತುಗಳನ್ನು ತಯಾರಿಸಿ ಸಚಿತ್ರ ಪುಸ್ತಕದಲ್ಲಿ ಅಂಟಿಸುವುದು. | ಅಧ್ಯಾಪಕರು ಹೆತ್ತವರು. | ಜೂನ್-ಮಾರ್ಚ್ |